ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ರ್ಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 99.

ಮೃತಪಟ್ಟ ಭದ್ರಕಾಳಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಾಜಿ ಬಚ್ಚೆ ಪುಟ್ಟಮಲ್ಲಪ್ಪ, ಮೃತಪಟ್ಟ ಸದರೀ ಭದ್ರಕಾಳಮ್ಮನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಪುಟ್ಟಮಲ್ಲಪ್ಪನವರು, ಸದರೀ ವಾಸಸ್ಥಳಾಗಿ ಮೃತಪಟ್ಟ ಭದ್ರಕಾಳಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮಲ್ಲಪ್ಪನವರ ಅರ್ಜೀಯನ್ನು 1884ನೇ ಇಸವೀ ಜೂನ್ ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭದ್ರಕಾಳಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 12ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 108.

ಮೃತಪಟ್ಟ ಪಂಡಿತ ಮುದ್ದಗಲ್ಲು ವ್ಯಾಸಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನರಸಿಹ್ಮಮೂರ್ತಿ ಮೈನರ್ ಗಾರ್ಡಿಯರ್ಷಿ ಮತ್ತು ತಾಯಿ ರಂಗೂಬಾಯಿ ವುರಫ್ ರಮಾಬಾಯಿ, ಮೃತಪಟ್ಟ ಸದರೀ ವ್ಯಾಸಾಚಾರ್ರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ನರಸಿಹ್ಮಮೂರ್ತಿ ಮೈನರ್ ಗಾರ್ಡಿಯರ್ಷಿ ಮತ್ತು ತಾಯಿ ರಂಗೂಬಾಯಿ ವುರಫ್ ರಮಾಬಾಯಿ ಸದರೀ ವಾಸಸ್ಥನಾಗಿ ಮೃತಪಟ್ಟ ವ್ಯಾಸಾಚಾರ್ರನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವಕ್ಕೆ 1860ನೇ ಇಸವೀ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ನರಸಿಹ್ಮಮೂರ್ತಿ ಮೈನರ್ ಗಾರ್ಡಿಯರ್ಷಿ ಮತ್ತು ತಾಯಿ ರಂಗೂಬಾಯಿ ವುರಫ್ ರಮಾಬಾಯಿಯ ಅರ್ಜಿಯನ್ನು 1884ನೇ ಇಸವಿ ಜೂನ್ ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವ್ಯಾಸಾಚಾರ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇದೆ.

1884ನೇ ಇಸವಿ ಅರ್ಜೀ ನಂಬರ್ 109.

ಮೃತಪಟ್ಟ ರಂಗನಾಯಿಕನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವರದ, ಮೃತಪಟ್ಟ ಸದರೀ ರಂಗನಾಯಿಕನಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜ ನಗರದ ಸ್ಥಳದ ಸದರೀ ವರದನು ಸದರೀ ವಾಸಸ್ಥನಾಗಿ ಮೃತಪಟ್ಟ ರಂಗನಾಯಿಕನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವರದನ ಅರ್ಜೀಯನ್ನು 1884ನೇ ಇಸವಿ ಜೂನ್ ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗನಾಯಿಕನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಮಾರ್ಚೀ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 119.

ಮೃತಪಟ್ಟ ಅಗಸಾಲೇ ಬಟ್ಟ್ಯಾಚಾರೀ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನರಸುಹ್ಮ, ಬೆಟ್ಟ್ಯಾ, ಮೈನರ್ ಗಾರ್ಡಿಯರ್ ಮತ್ತು ತಾಯಿ ಪುಟ್ಟಮ್ಮ, ಮೃತಪಟ್ಟ ಸದರೀ ಬಟ್ಟ್ಯಾಚಾರಿಗೆ ಹೆಂಡತಿ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಯಿಟಿಗೆಗೂಡು ಸ್ಥಳದ ನರಸುಹ್ಮ, ಬೆಟ್ಟ್ಯಾ, ಮೈನರ್ ಗಾರ್ಡಿಯರ್ ಮತ್ತು ತಾಯಿ ಪುಟ್ಟಮ್ಮ ಸದರೀ ವಾಸಸ್ಥನಾಗಿ ಮೃತಪಟ್ಟ ಬೆಟ್ಟ್ಯಾಚಾರಿ ಜಿಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿಗಳ ಸೂಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನರಸುಹ್ಮ, ಬೆಟ್ಟ್ಯಾ, ಮೈನರ್ ಗಾರ್ಡಿಯರ್ ಮತ್ತು ತಾಯಿ ಪುಟ್ಟಮ್ಮ, ಇವರ ಅರ್ಜೀಯನ್ನು 1884ನೇ ಇಸವಿ ಜೂರ್ ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಟ್ಟ್ಯಾಚಾರೀ ಆಸ್ತಿಗೆ ಹಕ್ಕುದಾರರಾದ ವಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಮಾರ್ಚೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎ. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ಇಸ್ತಿಹಾರ್ ನಾಮಾ.

ತಾರೀಖು 3ನೇ ಮಾರ್ಚೀ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಖಿಡ್ಡಾಯಾನೆ ಅನೆಗಳನ್ನ ಹಿಡಿಯತಕ್ಕ ಕೆಲಸ ನಡಿಸಲ್ಪಡುವದರಿಂದ ಸಾಲ್ ವಜಕೂರ್ ಮೇ 1ನೇ ಮರ್ಕುಂ ಲಾಗಾಯತು ಆಗಸ್ಟು 31ನೇ ಮಕ್ಕುಂವರೆಗೆ, ಚಾಮರಾಜನಗರಕ್ಕೂ, ಹುಣಸೂರಿಗೂ, ಮಧ್ಯದಲ್ಲಿರುವ ಸರ್ಕಾರದ ರಸ್ತೆಗೆ ಪೂರ್ವ ದಿಕ್ಕಿನಲ್ಲಿರುವ ಯಾವ ಡಿಸ್ಟ್ರಿಕ್ಟು ಜಂಗ್ಲಿ ಯಲ್ಲಾಗಲಿ ಷಿಕಾರಿ ಆಡುವ ಬಗ್ಯೆ ಅಪ್ಪಣೆ ಕೊಡಲ್ಪಡುವದಿಲ್ಲವು.

ಎ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ತಾರೀಖು 15ನೇ ಮಾರ್ಚೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ತಿರುಮಕೋಡ್ಲು ನರಸಿಪುರ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತೈನಜನ್ನು ಹಾಜರ್ ಮಾಡಿದವನೇ ಯಾಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇ ಯಾಗಲೀ ಈ ನೋಟೀಸ್ ತಾರೀಖು ಲಗಾಯಿತು ವಂದು ತಿಂಗಳೊಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತು ಕಿಮ್ಮತ್ತು.
4ನೇ ಬುಕ್ಕು ನಂಬರ್ 9 1881—82	ಚಾಮರಾಜನಗರದ ತಾಲ್ಲೂಕು ಆಲೂರು ಗ್ರಾಮದ ಮುದ್ದುಕೃಷ್ಣಯ್ಯಂಗಾರ್ರು ಶ್ರೀವೈಷ್ಣವ ಜಾತಿ ಕೃಷಿಜೀವನ	ಚಾಮರಾಜನಗರ ತಾಲ್ಲೂಕು ಆಲೂರು ಕುಳು ವೆಂಗಟಿಯ್ಯನಪರ ಮಗ ಕೃಷ್ಣಯ್ಯಂಗಾರ್ ಶ್ರೀವೈಷ್ಣವ ಜಾತಿ ಕೃಷಿ ಜೀವನ	3—2—82	3—2—82	400 ರೂಪಾಯಿನ ಭೂಸ್ಥಿತಿ ಆಧಾರ ಪತ್ರ.

ಅಬ್ದುಲ್‌ಖಾದರ್ ಕೆ. ಬಿ., ರಿಜಿಸ್ಟ್ರಾರ್.